**ಸಾಕ್ಷಿಯನ್ನು ದಿನಾಂಕ 06.04.2021 ರಂದು ಪುನಃ ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.**

**ಪಾಟೀ ಸವಾಲುಃ ಆರೋಪಿತರ ವಕೀಲರಾದ ಶ್ರೀ ಟಿ ಪಿ ಡಿ ರವರಿಂದಃ**

1. ನನಗೆ ವಿನಯಕುಮಾರ ಗೊತ್ತಿದ್ದಾರೆ ಎಂದರೆ ಸರಿಯಲ್ಲ, ನಾನು ವಿನಕುಮಾರ ಜೊತೆ ಬಂದಿದ್ದೇನೆ ಎಂದರೆ ಸರಿಯಲ್ಲ, ನಾನು ಪೋಲಿಸರ ಜೊತೆ ಬಂದಿದ್ದೇನೆ. ನಾನು 2016 ರಲ್ಲಿ ಅಮೆಜಾನ್ ನಲ್ಲಿ ಡೆಲಿವರಿ ಬಾಯ್ ಆಗಿ ಕೆಲಸ ಮಾಡುತ್ತಿದ್ದ ಬಗ್ಗೆ ದಾಖಲೆ ಹಾಜರು ಮಾಡಿಲ್ಲ. ನಾನು 2016 ರಲ್ಲಿ ಅಮೆಜಾನ್ ನಲ್ಲಿ ಡೆಲಿವರಿ ಬಾಯ್ ಆಗಿ ಕೆಲಸ ಮಾಡುತ್ತಿರಲಿಲ್ಲ ಮತ್ತು ಈ ಬಗ್ಗೆ ಸುಳ್ಳು ಸಾಕ್ಷಿ ನೀಡಿದ್ದೇನೆ ಎಂದರೆ ಸರಿಯಲ್ಲ. ಪಾರ್ಸಲ್ ಗೆ ಸಂಬಂಧಪಟ್ಟ ಡೆಲಿವರಿ ನೋಟ್ ನನ್ನ ಬಳಿ ಇತ್ತು ಎಂದರೆ ಸರಿ. 6 ನೇ ಮುಖ್ಯ ರಸ್ತೆಯಲ್ಲಿ ನಾನು ಯಾವ ವಿಳಾಸಕ್ಕೆ ಪಾರ್ಸಲ್ ಕೊಡಲು ಹೋಗಿದ್ದೆ ಎಂದು ಈಗ ನೆನಪಿಲ್ಲ. ಅಂದು ನಾನು ಪಾರ್ಸಲ್ ನ್ನು ಡೆಲಿವರಿ ಕೊಟ್ಟಿಲ್ಲ. ಅಂದು ನಾನು ಘಟನೆಯನ್ನು ನೋಡಿದ ಕಾರಣ ಯಾವುದೇ ಪಾರ್ಸಲ್ ಗಳನ್ನು ವಿಳಾಸಗಾರರಿಗೆ ತಲುಪಿಸಿಲ್ಲ ಮತ್ತು ನೇರವಾಗಿ ಮನೆಗೆ ವಾಪಸ್ಸು ಬಂದಿದ್ದೇನೆ.

2. ಪಾರ್ಸಲ್ ಗಳನ್ನು ತಲುಪಿಸುವ ಬಗ್ಗೆ ದಿನಾಂಕ ಮತ್ತು ವೇಳೆ ಯನ್ನು ಗ್ರಾಹಕರ ಮೊಬೈಲ್ ಗೆ ತಿಳಿಸಲಾಗುತ್ತದೆ ಎಂದರೆ ಸಾಕ್ಷಿದಾರರು ದಿನಾಂಕವನ್ನು ಮಾತ್ರ ತಿಳಿಸಲಾಗುತ್ತದೆ ಆದರೆ ವೇಳೆಯನ್ನು ತಿಳಿಸುವುದಿಲ್ಲ ಎಂದು ನುಡಿಯುತ್ತಾರೆ. ಪಾರ್ಸಲ್ ಗಳನ್ನು ಡೆಲಿವರಿ ಮಾಡದೇ ಇದ್ದ ಬಗ್ಗೆ ಕಾರಣ ತಿಳಿಸಬೇಕು ಎಂದರೆ ಸರಿ. ಪಾರ್ಸಲ್ ಗಳನ್ನು ಡೆಲಿವರಿ ಮಾಡದೇ ಇದ್ದ ಬಗ್ಗೆ ಟೀಂ ಲಿಡರ್ ಗೆ ಮಾಹಿತಿ ಕೊಟ್ಟಿದ್ದೇನೆ. ಮರುದಿನ ಸಹ ಪಾರ್ಸಲ್ ಗಳನ್ನು ಡೆಲಿವರಿ ಮಾಡಿಲ್ಲ. 6 ನೇ ಮುಖ್ಯ ರಸ್ತೆಯಲ್ಲಿ 2-3 ಅಪಾರ್ಟಮೆಂಟ್ ಗಳು ಇದೆ ಹೆಸರು ಗೊತ್ತಿಲ್ಲ. ನಾನು ವಿಳಾಸ ಕೆಳಿಕೊಂಡು ಅಪಾರ್ಟಮೆಂಟ್ ಹತ್ತಿರ ಹೋಗಿದ್ದೆ. ನನ್ನ ಮನೆಯಿಂದ 6 ನೇ ಮುಖ್ಯ ರಸ್ತೆಗೆ ಅಂದಾಜು 1 ಕಿಮೀ ದೂರ ಇದೆ. ಸ್ಥಳದ ವಿಳಾಸಗಳ ಬಗ್ಗೆ ಸುಮಾರಾಗಿ ಗೊತ್ತಿದೆ.

3. ಮಾತೃಮಂಡಲಿ ಸರ್ಕಲ್ ನಲ್ಲಿ ದೇವಸ್ಥಾನ ಇದೆ. 5 ಜನ ಆರೋಪಿಗಳನ್ನು ನಾನು ನೋಡಿದ್ದೇನೆ, ಮಾತುಕತೆ ಇಲ್ಲ. ನನ್ನ ಮತ್ತು ಆರೋಪಿಗಳ ನಡುವೆ ಗಲಾಟೆ ಆಗಿಲ್ಲ. ಆರೋಪಿಗಳು ಅಂಚೆ ಕಚೇರಿ ಪಕ್ಕ ಕಾರಿಗೆ ಒರಗಿಕೊಂಡು ನಿಂತಿದ್ದರು. ನಾನು ಹೇಳಿದಅಪಾರ್ಟಮೆಂಟ್ ನಿಂದ ಅಂಚೆ ಕಚೇರಿಗೆ 500-600 ಅಡಿ ದೂರ ಇದೆ ಎಂದರೆ ಸರಿಯಲ್ಲ. ಹೈವೆ ಇಟಿಂಗ್ ಹೋಟೆಲ್ ನ ಅಕ್ಕಪಕ್ಕ 6 ನೇ ಕ್ರಾಸ್ ಮತ್ತು 6 ನೇ ಮುಖ್ಯ ರಸ್ತೆಯಲ್ಲಿ ಅಪಾರ್ಟಮೆಂಟ್ ಗಳು ಇದೆ. ವ್ಯಕ್ತಿ ಬಿದ್ದ ಸ್ಥಳದಲ್ಲಿ ಅಪಾರ್ಟಮೆಂಟ್ ಇಲ್ಲ. ವ್ಯಕ್ತಿ ಬಿದ್ದ ಸ್ಥಳದಲ್ಲಿ 3 ರಸ್ತೆಗಳು ಸೇರುತ್ತದೆ ಎಂದರೆ ಸರಿ. ಮಾತೃಮಂಡಲಿ ಸರ್ಕಲ್ ಪಕ್ಕದ ರಸ್ತೆಯಲ್ಲಿ ಏಕಮುಖ ವಾಹನ ಸಂಚಾರ ಇತ್ತು ಎಂದರೆ ಸರಿ. ಅಪಘಾತ ಶಬ್ದ ಕೇಳಿ ನಾನು ಹಿಂದೆ ತಿರುಗಿ ನೋಡಿದ್ದೇನೆ ಎಂದರೆ ಸರಿ. ವ್ಯಕ್ತಿ ಬಿದದ್ದಿದ್ದ ಸ್ಥಳದಿಂದ ಅಪಾರ್ಟಮೆಂಟ್ ಗೆ 400 ಅಡಿ ದೂರ ಇದೆ ಎಂದರೆ ಸರಿಯಲ್ಲ. ಅಪಾರ್ಟಮೆಂಟ್ ನ ಹೆಸರು ನೆನಪಿಲ್ಲ.

4. ಘಟನೆ ನಡೆದ ಸ್ಥಳದ ಪಕ್ಕದ ಕಟ್ಟಡದ ಬಳಿ ನಾನು ಇದ್ದೆ. ಕಾರು ಸ್ಕೂಟರ್ ಗೆ ಅಪಘಾತ ಪಡಿಸಿದ ಬಗ್ಗೆ ನಾನು ನೋಡಿಲ್ಲ ಎಂದರೆ ಸರಿ. ಸ್ಥಳದಲ್ಲಿ ನನಗೆ ಪರಿಚಯ ಇದ್ದ ವ್ಯಕ್ತಿಗಳು ಇರಲಿಲ್ಲ. ನಾನು ಸುಮಾರು 5 ನಿಮಿಷಗಳ ಕಾಲ ಸ್ಥಳದಲ್ಲಿ ಇದ್ದೆ. ನಾನು ವ್ಯಕ್ತಿಯ ಹತ್ತಿರ ಹೋಗಿ ಸದರಿ ವ್ಯಕ್ತಿಗೆ ರಕ್ತ ಬರುತ್ತಿದ್ದ ಕಾರಣ ನಾನು ನೋಡಿ ಗಾಬರಿಯಿಂದ ಹೊರಟು ಹೋಗಿದ್ದೇನೆ. ಸದರಿ ವ್ಯಕ್ತಿಯ ತಲೆ ಮತ್ತು ಕೈಗಳಿಂದ ರಕ್ತ ಬರುತ್ತಿತ್ತು. ನಾನು ಘಟನೆಯನ್ನು ನೋಡಿ ಕೂಗಿಕೊಂಡಿಲ್ಲ. ಕಾರಿನ ಮುಂದೆ ಬಿದ್ದಿದ್ದ ಸ್ಕೂಟರ್ ನನಗೆ ಕಾಣಿಸುತ್ತಿರಲಿಲ್ಲ ಎಂದರೆ ಸರಿಯಲ್ಲ. ಸ್ಥಳದಲ್ಲಿ ಬಿದ್ದಿದ್ದ ವ್ಯಕ್ತಿ ನನಗೆ ಕಾಣಿಸುತ್ತಿರಲ್ಲಿ ಎಂದರೆ ಸರಿಯಲ್ಲ. ಸ್ಕೂಟರ್ ನ ಮುಂಬಾಗ ನನಗೆ ಕಾಣಿಸುತ್ತಿತ್ತು. ಬಿದ್ದ ವ್ಯಕ್ತಿಗೆ ಸ್ಕೂಟರ್ ಮರೆಯಾಗಿತ್ತು ಎಂದರೆ ಸರಿಯಲ್ಲ. ಸ್ಕೂಟರ್ ನ ವ್ಯಕ್ತಿ ಬಿದ್ದಿದ್ದರು. ವ್ಯಕ್ತಿಯ ತಲೆ ರಾಯಲ್ ವರ್ಲ್ಡ್ ದಿಕ್ಕಿಗೆ ಇತ್ತು ಕಾಲು ಹೈವೆ ಇಟಿಂಗ್ ಹೋಟೆಲ್ ಕಡೆ ಇತ್ತು. ಯಾವ ಯಾವ ವ್ಯಕ್ತಿಗಳು ಯಾವ ಯಾವ ಆಯುಧದಿಂದ ಸದರಿ ವ್ಯಕ್ತಿಯ ದೇಹದ ಯಾವ ಯಾವ ಬಾಗಕೆ ಹಲ್ಲೆ ಮಾಡಿದ್ದಾರೆ ಎಂದು ಹೇಳಲು ಬರುವುದಿಲ್ಲ. ಬೇರೆ ವ್ಯಕ್ತಿಗಳು ಬಿಡಿಸಲು ಬಂದಿಲ್ಲ. ಹಲ್ಲೆಗೆ ಒಳಗಾದ ವ್ಯಕ್ತಿ ಕೂಗಿಕೊಂಡಿಲ್ಲ. ಹಲ್ಲೆ ಮಾಡಿದ ವ್ಯಕ್ತಿಗಳು ನನ್ನನ್ನು ನೋಡಿಲ್ಲ ಮತ್ತು ನನಗೆ ಬೆದರಿಕೆ ಹಾಕಿಲ್ಲ.

**ಪಾಟೀ ಸವಾಲು: ಆರೋಪಿತಗಳ ಪರ ವಕೀಲರ ಕೋರಿಕೆ ಮೇರೆಗೆ ಮುಂದುವರೆದ ಪಾಟಿಸವಾಲಿಗೆ ಸಮಯ ನೀಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.)

**ಓ ಹೇ ಕೇ ಸ ಇ ಎ .,**

**4 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧಿಶರು ,**
**ಮೈಸೂರು.**